

ಆಭಾ ಜತೆ ರಶ್ಮಿ

# ಅರ್ಥ ಬಯಸದ ಪ್ರೀತಿಯ ಭಾಷೆ

**–ರಶ್ಮಿ ಅಭಯಸಿಂಹ**
ಕಲಾವಿದೆ–ಬರಹಗಾರ್ತಿ

ಮಗು ಮಡಿಲಿಗೆ ಬಂದಾಗಿನಿಂದಲೇ ತಾಯಿ–ಮಗುವಿನ ನಡುವೆ ಅಪ್ರಜ್ಞಾಪೂರ್ವಕವಾಗಿ ಅವ್ಯಕ್ತವಾದ ಭಾಷೆಯೊಂದು ರೂಪುಗೊಂಡುಬಿಡುತ್ತದೆ. ಮಗು ತೊದಲಲು ಆರಂಭಿಸಿದಾಗ ಭಾಷೆಗೊಂದು ರೂಪ ಸಿಗುತ್ತಾ ಹೋಗುತ್ತದೆ. ಅವರಿಬ್ಬರದ್ದೇ ಆದ 'ಕೋಡ್' ಭಾಷೆಯೊಂದು ಸೃಷ್ಟಿಯಾಗುತ್ತದೆ. ಅದು ಸಂಜ್ಞೆಯೂ ಆಗಿರಬಹುದು ಅಥವಾ ಪದಗಳೂ ಆಗಿರಬಹುದು.

ಭಾಷಾತಜ್ಞರಿಗೂ ನಿಲುಕದ ಸುಂದರ ಪದಗಳು ಅಮ್ಮ–ಮಕ್ಕಳ ನಡುವೆ ಸೃಷ್ಟಿಯಾಗಿರುತ್ತವೆ. ಬೇರೆ ಎಲ್ಲೂ, ಯಾರೂ ಕೇಳಿರದ, ಹೇಳಿರದ, ಯಾರಿಗೂ ಅರ್ಥವೂ ಆಗದ, ಅರ್ಥವನ್ನೂ ಬಯಸದ, ಅಮ್ಮ–ಮಗುವಿಗೆ ಮಾತ್ರ ಸಂಪರ್ಕ ಕೊಂಡಿಯಾಗಬಲ್ಲ ಮಾತುಗಳವು. ಇದು ಯಾವುದೇ ತಾಯಿಗೂ ಸಿಗುವ ಅನುಭವ.

ಕೆಲವರಿಗೆ ಇದು ಗಮನಕ್ಕೆ ಬಂದಿರಬಹುದು. ಕೆಲವರಿಗೆ ಬದುಕಿನ ಒತ್ತಡಗಳ ನಡುವೆ ಗಮನಿಸಲು ಸಾಧ್ಯವಾಗದೇ ಇರಬಹುದು. ಆದರೆ ನೆನಪಿಸಿಕೊಂಡಾಗ ಅಂಥ ಪದಗಳು, ಭಾಷೆ ಬಹಳ ಖುಷಿ, ಪ್ರೀತಿಯನ್ನು ಸುರಿಸುತ್ತವೆ. ನನ್ನ ಮಗಳು ಮಗುವಾಗಿದ್ದಾಗಿನ ದಿನಗಳನ್ನು ನೆನಪಿಸಿಕೊಂಡರೆ, ಆಗ ಅವಳು ಹೇಳುತ್ತಿದ್ದ ಕೆಲವೊಂದು ಪದಗಳು ಈಗಲೂ ಕಚಗುಳಿಯಿಟ್ಟಂತೆ ಅನಿಸುತ್ತವೆ.

ಅವಳು ಆಗ 'ಅಯ್ಯ' ಎಂಬ ಪದ ಹೇಳುತ್ತಿದ್ದಳು. ಯಾರಿಗೂ ಅವಳು ಏನು ಹೇಳುತ್ತಿದ್ದಾಳೆ ಎನ್ನುವುದು ಗೊತ್ತಾಗುತ್ತಿರಲಿಲ್ಲ. ಅಯ್ಯ ಎಂದರೆ 'ಐ ಲವ್ ಯು' ಎಂದು. ಎಲ್ಲಾದರೂ ಮೇಲೆ ನಿಲ್ಲಿಸಿ, ಅಲ್ಲೇ ಇರು ಬರಬೇಡ ಅಂದ್ರೆ 'ಅಯ್ಯ' ಎನ್ನುತ್ತಾ ಮುದ್ದು ಮುದ್ದಾಗಿ ಪೂಸಿ ಹೊಡೆಯುತ್ತಿದ್ದಳು. ಅವಳೊಂದಿಗೆ ಹಟ ಮಾಡಿದರೆ, ಜೋರು ಮಾಡಿದರೆ, ಕೋಪಿಸಿಕೊಂಡರೆ ಬರುತ್ತಿದ್ದ ಪದ ಅದೇ. ಆ ಪದ ಕೇಳಿದಾಗೆಲ್ಲ ಅವಳ ಮೇಲೆ ಅಕ್ಕರೆ ತುಂಬಿಬರುತ್ತಿತ್ತು. ಈಗಲೂ ಆ ಪದವನ್ನು ಅವಳು ಬದಲಿಸಿಕೊಂಡಿಲ್ಲ.

ಅವಳಿಗೆ ಸ್ನಾನ ಎಂದರೆ ತುಂಬಾ ಇಷ್ಟವಾಗುತ್ತಿತ್ತು. ಅದಕ್ಕೆ ಅವಳು 'ನಾನಾ' ಎನ್ನುತ್ತಿದ್ದಳು. ನಾಲಗೆ ತಿರುಗದೇ ಹಾಗೆ ಹೇಳುತ್ತಿದ್ದರೂ, ಎಷ್ಟು ಮುದ್ದಾಗಿ ಕೇಳಿಸುತ್ತಿತ್ತು. ಹೀಗೆ ನನ್ನನ್ನು–ಅವಳನ್ನು ಬೆಸೆದ ಸಾಕಷ್ಟು ಪ್ರೀತಿಯ ಪದಗಳಿವೆ.

ತೊದಲು ನುಡಿಗಳಿಂದ ಸ್ಪಷ್ಟವಾಗಿ ಮಾತಾಡಲು ಅವಳು ಆರಂಭಿಸಿದಾಗ, ಅಯ್ಯೋ ಎಲ್ಲಾ ಸರಿಯಾಗೇ ಮಾತಾಡುತ್ತಿದ್ದಾಳಲ್ಲ ಅಂತ ನಾನು ಬೇಸರ ಮಾಡಿಕೊಂಡದ್ದೂ ಇದೆ. ತಪ್ಪು ತಪ್ಪಾಗಿ, ಮುದ್ದು ಮುದ್ದಾಗಿ ಪೆದ್ದು ಪೆದ್ದಾಗಿ ಆಡುವ ಆ ಭಾಷೆಯನ್ನು ಕಳೆದುಕೊಳ್ಳುತ್ತೇನಲ್ಲ ಎಂದು ಅನಿಸಿದ್ದೂ ಇದೆ. ■

# ಮಡಿಲಿಗೆ ಬಿದ್ದಾಕ್ಷಣ...

**–ರಾಧಿಕಾ ರಾವ್,**
ನಟಿ

ಅಮ್ಮ ಎಂಬ ಪದ ಅಮೂಲ್ಯ ಮತ್ತು ಅದ್ಭುತವಾದುದ್ದು. ಮಗು ತಾಯಿಯ ಗರ್ಭದಲ್ಲಿ ಬೆಳೆಯುತ್ತಿರುವಾಗಲೇ ಅಮ್ಮ–ಮಗುವಿನ ಭಾಷೆಯೂ ಮೊಳಕೆಯೊಡೆಯುತ್ತದೆ. ಹೊಟ್ಟೆಯಲ್ಲಿರುವಾಗಲೇ ಮಗುವನ್ನು ಮಾತಿಗೆಳೆಯುವ ತಾಯಿ ತನ್ನ ಕನಸುಗಳನ್ನು ಒಂದೊಂದಾಗಿಯೇ ಅದರೊಟ್ಟಿಗೆ ಬಿಚ್ಚಿಡತೊಡಗುತ್ತಾಳೆ. ಅಲ್ಲಿಂದಲೇ ತಾಯಿ–ಮಗುವಿನ ಬಾಂಧವ್ಯ ಬೆಸೆದುಕೊಳ್ಳುತ್ತದೆ.

ಮಗು ತಾಯಿ ಮಡಿಲಿಗೆ ಬಿದ್ದಾಕ್ಷಣ, ತಾಯಿ–ಮಗುವಿನ ಭಾಷೆಗೆ ಚಾಲನೆ ಸಿಗುತ್ತದೆ. ಮಗುವಿನ ಚಲನವಲನ, ಅಳು–ನಗು ಭಾಷಾ ಸಂವಹನದ ಸಂಕೇತವಾಗಿ ಕಾಣುತ್ತದೆ. ತನ್ನ ಕಂದಮ್ಮನ ಬೇಕು ಬೇಡಗಳನ್ನು ಅರಿತು ಅದಕ್ಕೆ ಸ್ಪಂದಿಸುವ ತಾಯಿಗೆ, ಮಗುವಿನ ವರ್ತನೆಯಿಂದಲೇ ಅದರ ಬೇಕು ಬೇಡಗಳು ತಿಳಿಯುತ್ತವೆ. ಇದು ಸಾಧ್ಯವಾಗುವುದು ತಾಯಿಗೆ ಮಾತ್ರ. ಮಗುವಿನ ಹಸಿವು, ಬಾಯಾರಿಕೆ, ನಿದ್ದೆ ಇದೆಲ್ಲವೂ ತಿಳಿಯಲು ಅಮ್ಮನಿಗೆ ಮಾತ್ರ ಸಾಧ್ಯ. ಇದಕ್ಕೇ ಇರಬೇಕು 'ತಾಯಿಯೇ ಪ್ರತ್ಯಕ್ಷ ದೇವರು' ಅಂತ ಹಿರಿಯರು ಹೇಳುವುದು.

ಈ ಮುಂಚೆ ಹಲವು ಮಕ್ಕಳೊಂದಿಗೆ ಕಾಲ ಕಳೆದಿದ್ದೇನೆ. ಆದರೆ, ಆಗೆಲ್ಲಾ ಆ ಮಕ್ಕಳು ಏನು ಹೇಳುತ್ತಿವೆಯೋ ಅಥವಾ ಅವುಗಳಿಗೆ ಏನು ಬೇಕಿದೆ ಅನ್ನೋದು ತಾನಾಗಿಯೇ ನನಗೆ ಅರ್ಥವಾಗುತ್ತಿರಲಿಲ್ಲ. ಆ ಮಕ್ಕಳ ತಾಯಿಗೆ ಸುಲಭವಾಗಿ ಅರ್ಥವಾಗುತ್ತಿತ್ತು. ನನ್ನ ಮಗ ಹುಟ್ಟಿದ ಮೇಲೆ ತಾಯಿ–ಮಗುವಿನ ಆ ಭಾಷೆ ಅರಿವಿಗೆ ಬಂತು. ಈಗೀಗ ನನ್ನ ಮಗ, ತನ್ನ ಸುತ್ತಮುತ್ತಲಿನ ಚಲನವಲನ ಗಮನಿಸುತ್ತಾ ತನ್ನದೇ ರೀತಿಯಲ್ಲಿ ತೊದಲು ಮಾತಿಗಿಳಿಯುತ್ತಿದ್ದಾನೆ. ಫ್ಯಾನ್ ತೋರಿಸಿ ಫ್ಯಾ ಫ್ಯಾ, ತಾ ಅನ್ನುವುದಕ್ಕೆ ತ್ತತ್ತ, ತಿಂಡಿಗೆ ಅಮ್ಮ, ಹೊರಗಡೆ ಕರೆದುಕೊಂಡು ಹೋಗಲು ಕೈ ಆಡಿಸಿ ತಾ ತಾ ಅಂತಲೂ ಹೇಳುವುದು ನನಗಲ್ಲದೇ ಬೇರ್ಯಾರಿಗೆ ಅರ್ಥವಾಗಲು ಸಾಧ್ಯ? ಅಮ್ಮ ಎನ್ನುವ ಪದವನ್ನು ಮಾತ್ರ ಸರಿಯಾಗಿ ಉಚ್ಚಾರಣೆ ಮಾಡುವುದು ಅವನ ವಿಶೇಷ. ■



ಮಗ ಅಗಸ್ತ್ಯನೊಂದಿಗೆ ರಾಧಿಕಾ ರಾವ್